# ತುಂಗೆಯಂಥ ಸಂಗೀತ!

‘ಚಾರ್ಲಿ 777’ ಸಿನಿಮಾದ ಮೂಲಕ ಚಂದನವನದಲ್ಲಿ ಗಟ್ಟಿಯಾಗಿ ಹೆಜ್ಜೆಯೂರಲು ಯತ್ನಿಸುತ್ತಿರುವ ಸಂಗೀತಾ ಶೃಂಗೇರಿ ಅವರಿಗೆ ಬಯೋಪಿಕ್‌ನಲ್ಲಿ ನಟಿಸುವ ಆಸೆಯಿದೆಯಂತೆ.

■ಪದ್ಮನಾಭ ಭಟ್



‘ಹರ ಹರ ಮಹಾದೇವ’ ಧಾರಾವಾಹಿಯ ‘ಸತಿ’ ಎಲ್ಲರ ನೆಚ್ಚಿನ ಪಾತ್ರವಾಗಿದ್ದಳು. ಅವಳಿಗೆ ಎಷ್ಟು ಮೆಚ್ಚುಗೆ ಸಿಕ್ಕಿತ್ತು ಎಂದರೆ ಅಗ್ನಿಪ್ರವೇಶವಾಗಿ ಆ ಪಾತ್ರ ಪರ್ಯಾವಸಾನವಾದಾಗ ‘ಸತಿ ಮರಳಿಬರಬೇಕು’ ಎಂಬ ಬೇಡಿಕೆಯೂ ಪ್ರೇಕ್ಷಕರಿಂದ ಬಂದಿತ್ತು! ‘ಸತಿ’ ಮರಳಿ ಬರಲಿಲ್ಲ. ಆದರೆ ಅವಳ ಪಾತ್ರಕ್ಕೆ ಜೀವತುಂಬಿದ ಸಂಗೀತಾ ಶೃಂಗೇರಿ, ಹಿರಿತೆರೆಯ ಮೂಲಕ ಮರಳಿಬಂದು ತನ್ನ ಅಭಿಮಾನಿಗಳಿಗೆ ರಸದೌತಣ ನೀಡಲು ಸಜ್ಜಾಗಿದ್ದಾರೆ.

ಹೆಸರಲ್ಲಿಯೇ ಇರುವಂತೆ ಸಂಗೀತಾ, ತುಂಗೆಯ ಒಡಲಿನ ಶೃಂಗೇರಿಯ ಹುಡುಗಿ. ಹುಟ್ಟಿದ್ದು ಶೃಂಗೇರಿಯಲ್ಲಷ್ಟೇ. ಬೆಳೆದಿದ್ದೆಲ್ಲ ಎಲ್ಲಿ ಎಂದು ಕೇಳಿದರೆ ಒಂದು ಉದ್ದ ಪಟ್ಟಿಯನ್ನೇ ಕೊಡಬೇಕಾಗುತ್ತದೆ ಅವರು. ಕಾರಣ ಇಷ್ಟೆ, ಅವರ ತಂದೆ ರಕ್ಷಣಾ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಪ್ರತಿ ಮೂರು ವರ್ಷಕ್ಕೆ ಒಂದೊಂದು ಕಡೆಗೆ ವರ್ಗವಾಗುತ್ತಿತ್ತು. ಹೀಗೆ ದೇಶದ ಹಲವೆಡೆ ತನ್ನ ಬಾಲ್ಯವನ್ನು ಹಂಚಿಕೊಂಡು ಬೆಳೆದವರು ಸಂಗೀತಾ. ಅವರ ತಂದೆಯ ಸೇವಾ ಅವಧಿಯ ಕೊನೆಯ ದಿನಗಳನ್ನು ಕಳೆದಿದ್ದು ಅಂಡಮಾನ್‌ನಲ್ಲಿ. ನಂತರ ಬೆಂಗಳೂರಿಗೆ ಬಂದು ನೆಲೆಸಿದರು.

ಕೇಂದ್ರೀಯ ವಿದ್ಯಾಲಯದಲ್ಲಿಯೇ ವಿದ್ಯಾಭ್ಯಾಸ ಮುಗಿಸಿದ ಸಂಗೀತಾಗೆ ನಟಿಯಾಗಬೇಕು ಎಂಬ ಹಂಬಲವೇನೂ ಇರಲಿಲ್ಲ. ಆದರೆ ನಾಲ್ಕನೇ ವಯಸ್ಸಿನಲ್ಲಿಯೇ ಭರತನಾಟ್ಯ ಕಲಿಕೆ ಆರಂಭಿಸಿದ್ದರು. ಕಾಲೇಜು ದಿನಗಳಲ್ಲಿಯೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮುಂದು. ಮಾಡೆಲಿಂಗ್ ಕಡೆಗೆ ಆಕರ್ಷಿತರಾಗಿ ಹಲವು ಸೌಂದರ್ಯಸ್ಪರ್ಧೆಗಳಲ್ಲಿ ಭಾಗವಹಿಸಿದರು. ಕ್ಯಾಮೆರಾ ಎದುರಿಸಿದ್ದು ಕಾಲೇಜು ದಿನಗಳಲ್ಲಿಯೇ ಒಂದು ಕಿರುಚಿತ್ರಕ್ಕಾಗಿ. ಆ ಕಿರುಚಿತ್ರವನ್ನು ನೋಡಿಯೇ ‘ಹರ ಹರ ಮಹಾದೇವ’ ಧಾರಾವಾಹಿಯ ‘ಸತಿ’ ಪಾತ್ರಕ್ಕೆ ಅವಕಾಶ ಸಿಕ್ಕಿದ್ದು.

ಹೀಗೆ ಕಿರುತೆರೆಯ ಮೊದಲ ಹೆಜ್ಜೆ ಪೌರಾಣಿಕ ಪಾತ್ರದ ಮೂಲಕ ಆಗಿದ್ದು ಶೃಂಗೇರಿ ಪುಣ್ಯ ಕ್ಷೇತ್ರದ ಆಶೀರ್ವಾದಬಲವೇ ಕಾರಣ ಎನ್ನುವುದು ಅವರ ಬಲವಾದ ನಂಬಿಕೆ.

‘ಅಪ್ಪ ಅಮ್ಮ ವರ್ಷಕ್ಕೆ ಒಂದು ತಿಂಗಳು ರಜದಲ್ಲಿ ಮಾತ್ರ ಶೃಂಗೇರಿಗೆ ಬರುತ್ತಿದ್ದರು. ನಮ್ಮಣ್ಣ ಹುಟ್ಟಿದ್ದು ಮಧ್ಯಪ್ರದೇಶದಲ್ಲಿ. ಆದರೆ ನಾನು ಮಾತ್ರ ಅಮ್ಮ ಶೃಂಗೇರಿಗೆ ಬಂದಿದ್ದಾಗಲೇ ಹುಟ್ಟಿದ್ದು. ಹಾಗಾಗಿ ಆ ಶೃಂಗೇರಿ ಕ್ಷೇತ್ರದ ಆಶೀರ್ವಾದ ನನ್ನಮೇಲಿದೆ ಎಂದೇ ನಾನು ನಂಬಿದ್ದೇನೆ. ನನಗೆ ಪೌರಾಣಿಕ ಪಾತ್ರದಲ್ಲಿ ನಟಿಸುವ ಅವಕಾಶ ಸಿಕ್ಕಿದ್ದೂ ಅದರಿಂದಲೇ. ಹಾಗಾಗಿಯೇ ನನ್ನ ಹೆಸರಿನ ಮುಂದೆ ಶೃಂಗೇರಿ ಎಂದು ಸೇರಿಸಿಕೊಂಡಿದ್ದೇನೆ’ ಎಂದು ಪುನೀತಭಾವದಿಂದ ಹೇಳಿಕೊಳ್ಳುತ್ತಾರೆ ಅವರು.

ಸಂಗೀತಾ ಧಾರವಾಹಿಯಲ್ಲಿ ನಟಿಸುತ್ತಿದ್ದಾಗಲೇ ‘ಎ ಪ್ಲಸ್’ ಎಂಬ ಒಂದು ಚಿತ್ರದಲ್ಲಿಯೂ ನಟಿಸಿದ್ದರು. ಅದು ಬಿಡುಗಡೆಯಾದರೂ ಅಷ್ಟೊಂದು ಸದ್ದು ಮಾಡಲಿಲ್ಲ. ಈಗ ‘ಚಾರ್ಲಿ 777’ ಚಿತ್ರದಲ್ಲಿ ರಕ್ಷಿತ್ ಶೆಟ್ಟಿಗೆ ನಾಯಕಿಯಾಗಿ ನಟಿಸುತ್ತಿದ್ದಾರೆ. ಈ ಚಿತ್ರ ತನಗೆ ನಟನಾಪಯಣದಲ್ಲಿ ಗಟ್ಟಿಯಾದ ನೆಲೆ ಕಲ್ಪಿಸುತ್ತದೆ ಎಂಬ ವಿಶ್ವಾಸ ಅವರದ್ದು.

‘ಈ ಚಿತ್ರಕ್ಕೆ ನಾನು ಆಡಿಷನ್‌ನಲ್ಲಿ ಭಾಗವಹಿಸಿಯೇ ಆಯ್ಕೆಯಾಗಿದ್ದು. ಅನಿಮಲ್ ವೆಲ್‌ಫೇರ್ ಆಫೀಸರ್ ಆಗಿ ನಟಿಸಿದ್ದೇನೆ. ವಿಭಿನ್ನವಾದ ಪಾತ್ರ. ತುಂಬ ಮಹತ್ವ ಇದೆ. ಹಾಗಾಗಿ ಒಪ್ಪಿಕೊಂಡಿದ್ದೇನೆ’ ಎನ್ನುವ ಸಂಗೀತಾ, ಸಿನಿಮಾದಲ್ಲಿ ಪಾತ್ರದಷ್ಟೇ ಕಥೆಯೂ ಮುಖ್ಯ ಎಂಬ ನಿಲುವು ಹೊಂದಿದವರು.

‘ಮಾಡರ್ನ್ ಆಗಲಿ ಟ್ರೆಡಿಷನಲ್ ಆಗಲಿ ಯಾವ ರೀತಿಯ ಪಾತ್ರವಾದರೂ ನನಗೆ ಹಿಂಜರಿಕೆ ಇಲ್ಲ. ಆದರೆ ಪಾತ್ರಕ್ಕಾಗಿ ಕಥೆ ಇರಬಾರದು. ಕಥೆಗಾಗಿ ಪಾತ್ರ ಇರಬೇಕು. ಒಂದು ಸಿನಿಮಾದಲ್ಲಿ ಎಲ್ಲ ಪಾತ್ರಗಳೂ ಮುಖ್ಯವಾಗಿರಬೇಕು. ಅಂಥ ಸಿನಿಮಾದ ಭಾಗವಾಗಲು ಬಯಸುತ್ತೇನೆ’ ಎಂಬುದು ಇವರ ಸ್ಪಷ್ಟ ಮಾತು.

ಎಸ್. ಮಹೇಂದರ್ ನಿರ್ದೇಶನದ ‘ಪಂಪ’ ಸಿನಿಮಾದಲ್ಲಿಯೂ ನಾಯಕಿಯಾಗಿ ನಟಿಸಿರುವ ಇವರಿಗೆ ಬಯೋಪಿಕ್‌ಗಳಲ್ಲಿ ನಟಿಸಬೇಕು ಎಂಬ ಆಸೆಯಿದೆ. ■